ಮಂಲಗಿರುತ್ತಾರೆ, ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಬಂದರು ಎದ್ದು ಕುಳಿತುಕೊಳ್ಳುತ್ತಾರೆ. ಇವ್ರೊತ್ತು ನಿರುದ್ಯೋಗದ ಬಗ್ಗೆ ವಿಷಯ ಬೇರೆ, ಇವರನ್ನು ನಾವು ನೇಮಕ ಮಾಡುವಾಗ ಅರ್ಜಿಯನ್ನು ಕರೆದು ನೇಮಕ ಮಾಡಿದ್ದೇವೆಯೇ ? ಬೆಂಗಳೂರಿನಲ್ಲಿದ್ದಂಥ ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರು ಹೋಗುವುದಕ್ಕಿ ಎಂಟು ದಿವಸ ಮುಂಚೆ ೭೮೦ ಜನರಿಗೆ ಅಪಾಯಿಂಟ್‌ಮೆಂಟ್ ಮಾಡಿ ಹೊರಟು ಹೋದರು, ಅದು ನಮಗೆ ಯಾರಿಗೂ ಗೊತ್ತಿಲ್ಲ. ಈಗ ಅವರಿಗೆಲ್ಲಾ ಬೆಂಗಳೂರು ಡಿವಿಜನ್‌ನಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ. ಈಗ ಅವರನ್ನೆಲ್ಲಾ ಶಾಸಕರ ಭವನದ ಹತ್ತಿರ ಕಾಯುಲಿಕ್ಕೆ ಹಾಕೋಣವೇ ? ಪೊಲಿಟಿಕಲ್ ಪ್ರೆಜರ್ ಮೇಲೆ ಇವೆಲ್ಲಾ ಆಗುತ್ತದೆ. ನೀವು ಯಾವ ಊರಿಗೆ ಹೋದರೂ ಅರ್ಜಿಗಳನ್ನು ಹಿಡಿದುಕೊಂಡು ಬರುತ್ತಾರೆ. ಇವರ ಅವಶ್ಯಕತೆ ಇರಲಿ, ಇಲ್ಲದೇ ಇರಲಿ ಇವರನ್ನು ತೆಗೆದುಕೊಳ್ಳಿ ಎಂದು ಹೇಳುವಂತಾದ್ದು ಇರುತ್ತದೆ. ಸುಪ್ರೀಂ ಕೋರ್ಟ್ ನ್ಯಾಯಾಲಯಕ್ಕೆ ಈ ವಿಚಾರ ಹೋದ ಮೇಲೆ ಅವರು ಹೇಳಿದಂತೆ ಕೇಳಬೇಕಾಗುತ್ತದೆ. ಹಿಂದಿನ ಮಾಜಿ ಮುಖ್ಯ ನ್ಯಾಯಾಧೀಶರು ಒಂದು ಪ್ರೆಸ್ ಇಂಟರ್‌ವ್ಯೂನಲ್ಲಿ ಹೇಳಿದ್ದಾರೆ. ರಾಜಾಸ್ಥಾನ್‌ನಲ್ಲಿ ಹೊಟ್ಟೆಗೆ ಹಿಟ್ಟಿಲ್ಲದೆ, ಕಲ್ಲು ಹೊಡೆಯುವಂಥ ಹೆಣ್ಣು ಮಕ್ಕಳ ಪರಿಸ್ಥಿತಿ ಯಾವ ರೀತಿ ಇತ್ತು ಎಂಬುದನ್ನು ಆ ನ್ಯಾಯಾಧೀಶರು ಹೇಳಿರುವ ಪ್ರೆಸ್ ಕಟಿಂಗ್‌ನ್ನು ನಾನು ನೋಡಿದ್ದೇನೆ. ಅವರು ಅದನ್ನು ಬಹಳ ಹೃದಯಂಗಮವಾಗಿ ವರ್ಣಿಸಿದ್ದಾರೆ. ಈ ಒಂದು ಪರಿಸ್ಥಿತಿ ಇರಬಾರದೆಂದು ಅವರು ಸೂಚನೆ ಕೊಟ್ಟಿದ್ದಾರೆ. ಆ ಪ್ರೆಸ್ ಕಟಿಂಗ್ಸ್ ನನ್ನ ಹತ್ತಿರ ಇದೆ. ನಾವು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನೋಡೋಣ. ನಾನು ೧೯೬೨ನೇ ಇಸವಿಯಿಂದ ಈ ಸಭೆಗೆ ಸದಸ್ಯನಾಗಿ ಬಂದಾಗಿನಿಂದಲೂ ನೋಡುತ್ತಿದ್ದೇನೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಿಮ್ಮ ಸರ್ಕಾರೀ ನೌಕರರಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇದೆಯೋ, ಇಲ್ಲವೋ? ಸರ್ಕಾರದಲ್ಲಿ ದುಡ್ಡೇ ಇಲ್ಲವೆಂದು ಬಹಳ ಜನ ಹೇಳುತ್ತಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.— ನೌಕರರಿಗೆ ಕೊಡುವುದಕ್ಕೆ ನಮ್ಮಲ್ಲಿ ದುಡ್ಡು ಇಲ್ಲದೇ ಏನೂ ಇಲ್ಲ. ಆ ಭಾವನೆ ತಮಗೆ ಬೇಡ. ಇತ್ತೀಚೆಗೆ ಅವರಿಗೆ ಸಂಬಳವನ್ನು ಹೆಚ್ಚು ಮಾಡಿರುವುದು ತಮಗೂ ಕೂಡ ಗೊತ್ತಿದೆ. ನಾವು ಕೊಡದಿದ್ದರೂ ಅವರು ಹೇಗೆ ತೆಗೆದುಕೊಳ್ಳಬೇಕೆಂದು ಗೊತ್ತಿದೆ, ತೆಗೆದುಕೊಳ್ಳುತ್ತಾರೆ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನ ಡಿಸಿಷನ್ ಆಗುವವರೆಗೂ ಕಾದು ನೋಡೋಣವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಕೂಡಲಸಂಗಮ ದೇವಸ್ಥಾನದ ರಕ್ಷಣೆ

೩೩೩. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೂಡಲ ಸಂಗಮ ದೇವಸ್ಥಾನಕ್ಕೆ ಪೂರ್ವ ಕಾಲದ ಐತಿಹಾಸಿಕ ಹಿನ್ನೆಲೆ ಏನು ?

ಆ) ನಾರಾಯಣಪುರ ಅಣೆಕಟ್ಟು ನಿರ್ಮಾಣದಿಂದ ಮುಳುಗಡೆಯಾಗುತ್ತಿರುವ ಈ ದೇವಸ್ಥಾನದ ರಕ್ಷಣೆಗಾಗಿ ಸರಕಾರದಿಂದ ತೆಗೆದುಕೊಂಡಿರುವ ಕಾಲ, ಕಾಲದ ನಿರ್ಣಯಗಳೇನು?

ಇ) ದೇವಸ್ಥಾನದ ರಕ್ಷಣೆಗಾಗಿ ಸಾರ್ವಜನಿಕರು ಮಾಡುತ್ತಿರುವ ಬೇಡಿಕೆಯ ಹಿನ್ನೆಲೆಯಲ್ಲಿ ಸರಕಾರದವರು ತೆಗೆದುಕೊಳ್ಳುವ ನಿರ್ಣಯಗಳೇನು ?

ಈ) ದೇವಸ್ಥಾನದ ರಕ್ಷಣೆಗಾಗಿ ಇಲ್ಲಿಯವರೆಗೆ ತಯಾರಾಗಿರುವ ನೀಲಿ ನಕ್ಷೆ ಹಾಗೂ ಮಾಡಿರುವ ಖರ್ಚು ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೂಡಲ ಸಂಗಮವು ಶ್ರೀ ಬಸವಣ್ಣನವರು ಐಕ್ಯವಾದ ಸ್ಥಳವೆಂದು ತಿಳಿಯಲಾಗಿದೆ.

ಆ) ಹೊಸ ಸಂಗಮ ಸಂಕೀರ್ಣವನ್ನು ನಿರ್ಮಾಣ ಮಾಡಲು ೨೧೪ ಲಕ್ಷ ರೂ.ಗಳ ಅಂದಾಜಿಗೆ ದಿನಾಂಕ ೨೫-೫-೮೨ರ ಸರ್ಕಾರೀ ಆಜ್ಞೆಯಲ್ಲಿ ಅನುಮೋದನೆ ನೀಡಲಾಗಿದೆ. ನೂತನ ಶ್ರೀ

ಸಂಗಮೇಶ್ವರ ದೇವಸ್ಥಾನವನ್ನು ನಿರ್ಮಾಣ ಮಾಡುವ ಸಲುವಾಗಿ, ಸಂಗಮೇಶ್ವರ ದೇವಸ್ಥಾನದ ವಿಶ್ವಸ್ಥ ಸಮಿತಿಯು ದಿನಾಂಕ ೯-೫-೧೯೮೨ರಂದು ನಡೆದ ಸಭೆಯಲ್ಲಿ ತೆಗೆದುಕೊಂಡ ಸರ್ವಾನುಮತದ ನಿರ್ಣಯದಂತೆ, ಮೂಲ ಲಿಂಗಕ್ಕೆ ಯಾವ ರೀತಿಯು ಧಕ್ಕೆಯೂ ಬಾರದಂತೆ ಎಚ್ಚರಿಕೆ ವಹಿಸಬೇಕೆಂಬ ನಿಬಂಧನೆಯೊಡನೆ ಹಳೆಯ ದೇವಸ್ಥಾನವನ್ನು ಬಿಚ್ಚಿಲು, ದಿನಾಂಕ ೭-೧೨-೧೯೮೩ರ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ. ಸಂಗಮ ಸಂಕೀರ್ಣದ ಉನ್ನತ ಮಟ್ಟದ ಸಲಹಾ ಸಮಿತಿಯ ದಿನಾಂಕ ೨೪-೫-೮೪ರಂದು ನಡೆದ ಸಭೆಯಲ್ಲಿ, ಪ್ರಮುಖ್ಯವಾಗಿ ನೂತನ ದೇವಸ್ಥಾನದ ಸ್ಥಳದ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಬಿಜಾಪುರ ಮತ್ತು ಅಕ್ಕಪಕ್ಕದ ಜಿಲ್ಲೆಗಳ ಶಾಸಕರುಗಳನ್ನು ಆಹ್ವಾನಿಸಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ನಿರ್ಧಾರ ತೆಗೆದುಕೊಳ್ಳುವಂತೆ, ನಿರ್ಣಯಿಸಲಾಯಿತು.

೪) 'ಅ'ನಲ್ಲಿ ತಿಳಿಸಿರುವಂತೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯ-ಲ್ಲಿ ಸಭೆ ನಡೆಸಿ ಆಹ್ವಾನಿತರ ಅಭಿಪ್ರಾಯಗಳನ್ನು ಪಡೆದು ನಿರ್ಧಾರ ತೆಗೆದುಕೊಳ್ಳಲಾಗುವುದು.

ಈ) ಸಂಗಮ ಸಂಕೀರ್ಣದ ನಿರ್ಮಾಣಕ್ಕೆ ಮಂಜೂರಾದ ಅಂದಾಜು ವೆಚ್ಚ ೨೧೪ ಲಕ್ಷ ರೂ.ಗಳು ಡಿಸೆಂಬರ್ ೧೯೮೬ರ ಅಂತ್ಯದವರೆಗೆ ಆದ ವೆಚ್ಚ ೧೧೮.೪೪ ಲಕ್ಷ ರೂ.ಗಳು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರ ಬಾಯಲ್ಲಿ ಈ ರೀತಿಯ ಉತ್ತರ ಬರುತ್ತದೆಂದು ನಾನು ಭಾವಿಸಿರಲಿಲ್ಲ. ನನ್ನ ಮೊದಲನೆಯ ಪ್ರಶ್ನೆಗೆ ಅವರು ಉತ್ತರ ಕೊಡುತ್ತಾ, "ಕೂಡಲ ಸಂಗಮವು ಶ್ರೀ ಬಸವಣ್ಣನವರು ಐಕ್ಯವಾದ ಸ್ಥಳವೆಂದು ತಿಳಿಯಲಾಗಿದೆ." ಎಂದು ತಿಳಿಸಿದ್ದಾರೆ. ಆ ಸ್ಥಳ ಬಸವೇಶ್ವರರು ಐಕ್ಯವಾದ ಸ್ಥಳ ಹೌದೋ, ಅಲ್ಲವೋ ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳದೆ ಈಗಾಗಲೇ ಸುಮಾರು ೧೧.೩೪ಳಳ ಲಕ್ಷ ರೂಪಾಯಿಗಳನ್ನು ಅಲ್ಲಿ ಖರ್ಚು ಮಾಡಿದ್ದೀರಿ. ಇನ್ನೂ ಸಾಕಷ್ಟು ಹಣವನ್ನು ಖರ್ಚು ಮಾಡುವವರಿದ್ದೀರಿ. ಆದರೆ ಕೂಡಲ ಸಂಗಮವು ಶ್ರೀ ಬಸವಣ್ಣನವರು ಐಕ್ಯವಾದ ಸ್ಥಳವೆಂದು ತಿಳಿಯಲಾಗಿದೆ." ಎಂದು ಏನು ಹೇಳಿದ್ದೀರಿ ಇದು ಸರಿಯಲ್ಲ. ಇದನ್ನು ನಾನು ವಿರೋಧ ಮಾಡುತ್ತೇನೆ. ಮತ್ತು ಇದರ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ ನಂತರ ನಾನು ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಮ್ಮಲ್ಲಿ ತರ್ಜುಮೆ ಕೆಲಸ ಮಾಡುವಾಗ ಏನಾಗುತ್ತದೆ ಎಂಬ ಬಗ್ಗೆ ನಾನು ತಮಗೆ ಹೆಚ್ಚು ಹೇಳಬೇಕಾಗಿಲ್ಲ. ಆದರ ಬಗ್ಗೆ ದೊಡ್ಡ ವ್ಯಾಖ್ಯಾನ ಮಾಡಬೇಕಾಗಿಲ್ಲ. ಆದರೆ ಈಗ ಆಗಿರತಕ್ಕ ತೀರ್ಮಾನವನ್ನು ಮುಂದುವರಿಸಬೇಕೇ ? ತಿಳಿವಳಿಕೆ ಬೇಡವೇ ? ಎಂಬ ಬಗ್ಗೆ ನಿಮ್ಮ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ನಂತರ ನಾನು ಉತ್ತರವನ್ನು ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನನ್ನ ಅಭಿಪ್ರಾಯವನ್ನು ಹೇಳಿದರೇ ಆಗುವುದಿಲ್ಲ. ಇದರಲ್ಲಿ ತಪ್ಪು ಅಭಿಪ್ರಾಯವೂ ಕೂಡ ಮುಖ್ಯವಾಗಿ ಬೇಕಾಗಿದೆ.

SRI H. D. DEVEGOWDA.—Government has already taken the decision. I want to know what is working in the mind of the Hon. Member so far as the decision of the Government already taken by the Government is concerned.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸ್ವಾಮಿ, ಸರ್ಕಾರದ ತೀರ್ಮಾನ ಏನು? ಸಾರ್ವಜನಿಕರ ಬೇಡಿಕೆ ಏನು ? ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದೀರಾ ? ಅಲ್ಲಿ ಈಗಾಗಲೇ ಅರ್ಧ ಹಣವನ್ನು ಖರ್ಚು ಮಾಡಿದ್ದೀರಿ. ಆದರೆ ಅಲ್ಲಿ ಸರಿಯಾಗಿ ಕೆಲಸವಾಗುತ್ತಿಲ್ಲ, ಆ ಪ್ರದೇಶದ ಘನತೆ ಗೌರವಗಳಿಗೆ ತಕ್ಕ ರೀತಿಯಲ್ಲಿ ಕೆಲಸವಾಗುತ್ತಿಲ್ಲ ಎಂಬ ದೂರುಗಳು ಬಂದಿವೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯು ? ಬಂದಿದ್ದರೆ ಅದರ ಬಗ್ಗೆ ಸರ್ಕಾರದ ಕ್ರಮ ಏನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಇದು ಒಂದು ಸೂಕ್ಷ್ಮವಾದ ಪ್ರಶ್ನೆಯಾಗಿದೆ. ಇದು ೧೯೭೭ರಲ್ಲಿ ಮೊದಲು ತೀರ್ಮಾನವಾದದ್ದು. ಆ ತೀರ್ಮಾನದಲ್ಲಿ ೨೫ ಲಕ್ಷ ರೂಪಾಯಿಗಳಲ್ಲಿ

ದೇವಸ್ಥಾನ ಮತ್ತು ಐಕ್ಯ ಮಂಟಪವನ್ನು ಉಳಿಸಿಕೊಳ್ಳಬೇಕೆಂದು ತೀರ್ಮಾನವಾಗಿತ್ತು. ೧೯೭೮-೭೯ರಲ್ಲಿ ಇದನ್ನು ಪುನರ್ ವಿಮರ್ಶಿಸಲಾಗಿ ಮಂಟಪದ ಡಿಸೈನ್ ಬದಲಾವಣೆಯಾಗಿದೆ. ೧೯೮೨ರಲ್ಲಿ ಮತ್ತೆ ಪುನಃ ಅದರ ಬಗ್ಗೆ ನಮ್ಮ ವಿಶ್ವಸ್ಥ ಸಮಿತಿಯವರು, ರಾಜಕಾರಣಿಗಳು, ಮಠಾಧಿಪತಿಗಳು ಮತ್ತು ತಾಂತ್ರಿಕಜ್ಞರು ಎಲ್ಲರೂ ಸೇರಿಕೊಂಡಿದ್ದಾರೆ. ಇವರೆಲ್ಲರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಅಂತಿಮವಾಗಿ ನಿರ್ಣಯ ಮಾಡಿರುವುದರಿಂದ ಈಗ ಇರತಕ್ಕಂಥ ಐಕ್ಯ ಮಂಟಪವನ್ನು ಹಾಗೆಯೇ ಉಳಿಸಿಕೊಳ್ಳಬೇಕು. ಇದಕ್ಕೆ ಎಷ್ಟೇ ಹಣ ಖರ್ಚಾದರೂ ಸರಿ, ಪ್ಲೈ ಓವರ್ ಬ್ರಿಡ್ಜ್ ಕಟ್ಟಿ ದೇವಸ್ಥಾನಕ್ಕೆ ನೀರು ಬಂದಾಗಲೆಲ್ಲ ಲಿಂಗವು ಮುಳುಗಿದರೆ ಭಕ್ತಾದಿಗಳು ಹೋಗಲು ಸಾಧ್ಯವಾಗುವುದಿಲ್ಲವೆಂದು ಮೇಲುಗಡೆ ಇದೇ ಲಿಂಗವನ್ನು ಹಾಕತಕ್ಕಂಥ ಡಿಸೈನ್ ಹಾಕಿ, ದೇವಸ್ಥಾನಕ್ಕೆ ಪ್ಲೈ ಓವರ್ ಬ್ರಿಡ್ಜ್ ಮಾಡಬೇಕೆಂದೂ ಮತ್ತು ಐಕ್ಯ ಮಂಟಪ ಏನು ಇದೆ ಅದಕ್ಕೆ ಮೆಸನರಿ ವಾಲ್ ಆ ಜಾಗಕ್ಕೆ ಕಟ್ಟಿ ಅದನ್ನು ಶಾಶ್ವತವಾಗಿ ಉಳಿಸಿಕೊಳ್ಳತಕ್ಕಂಥದ್ದು ಮತ್ತು ಕೆಳಗಡೆ ಇರತಕ್ಕಂಥ ಲಿಂಗವನ್ನು ಭಯವಿಲ್ಲದ ರೀತಿಯಲ್ಲಿ ಕೇಳಲಿಕ್ಕೆ ಹೋದರೆ ಡ್ಯಾಮೇಜ್ ಆಗುತ್ತದೆಂದು ಬಹಳ ಸೂಕ್ಷ್ಮವಾಗಿ ಪರಿಶೀಲನೆ ಮಾಡಿ, ಅದನ್ನು ಉಳಿಸಿಕೊಳ್ಳಬೇಕೆಂದು ಸಂಪೂರ್ಣವಾಗಿ ಚರ್ಚೆಮಾಡಿ ನಿರ್ಣಯ ಮಾಡಿದ್ದಾರೆ. ನಮ್ಮ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ಧರ್ಮ ಪೀಠದ ಮುಖ್ಯಸ್ಥರು, ಸುತ್ತೂರು ಸ್ವಾಮೀಜಿಯವರು, ತೊಂಟಾರಾಧ್ಯ ಸ್ವಾಮಿಗಳು ಎಲ್ಲರೂ ಸೇರಿದ್ದಾರೆ. ಇದರಲ್ಲಿ ರಾಜಕಾರಣಿಗಳೂ ಸೇರಿದ್ದಾರೆ. ಮಾಜಿ ಉಪರಾಷ್ಟ್ರಪತಿಯವರೂ, ದೊಡ್ಡ ದೊಡ್ಡ ಮುಖಂಡರು ಸೇರಿರುತ್ತಾರೆ. ಮತ್ತೆ ಇದರ ಬಗ್ಗೆ ಈಗಾಗಲೇ ೧೧೫ ಲಕ್ಷ ೧೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಮ್ಮ ಕರ್ನಾಟಕದಲ್ಲಿರತಕ್ಕಂಥ ತಾಂತ್ರಿಕಜ್ಞರು ಏನೂ ಕಡಿಮೆ ಇಲ್ಲ. ಅವರ ಹೆಸರುಗಳನ್ನು ತೆಗೆದರೆ ಇನ್ನೊಬ್ಬರಿಗೆ ಪೂಜೆಕ್ಕೆ ಸಿಟ್ಟಾಗುತ್ತದೆಂದು ಇದು ಸೂಕ್ಷ್ಮವಾದ ಜಟಿಲವಾದ ಸಮಸ್ಯೆಯಾಗಿ ಇರುವುದರಿಂದ ಈ ದೇಶದ ಜನತೆಯ ಮುಂದೆ ಒಪ್ಪಿಸಿ ಮಾನ್ಯ ಮುಖ್ಯ ಮಂತ್ರಿಗಳು ಮನವಿಯನ್ನು ಕೂಡ ಹೇಳಿದ್ದಾರೆ. ಮನವಿಯನ್ನು ಮಾಡಿದಮೇಲೆ ಮಾನ್ಯ ತೊಂಟಾರಾಧ್ಯ ಸ್ವಾಮಿಗಳು ಹೇಳಿದರು ಹಿಂದೆ ಮಾಡಿರತಕ್ಕಂಥ ತೀರ್ಮಾನವೇ ಸರಿಯಾಗಿದೆ ಬದಲಾವಣೆ ಮಾಡಕೂಡದು ಎಂದು ಹೇಳಿದ್ದಾರೆ. ನಾನು ಹಿಂದೆ ಒಂದು ಪ್ರಾರಂಭಕ್ಕೆ ಅರಸೀಕೆರೆಗೆ ಹೋಗಿದ್ದಾಗ ಸಿರಿಗೆರೆ ಸ್ವಾಮೀಜಿಗಳು ಹಿಂದೆ ಆಗಿರತಕ್ಕಂಥ ತೀರ್ಮಾನವನ್ನು ಬದಲಾವಣೆ ಮಾಡಬಾರದೆಂದು ಹೇಳಿದ್ದಾರೆ. ರಾಜಕಾರಣಿಗಳು ಬದಲಾವಣೆ ಮಾಡಲಿಕ್ಕೆ ಹೊರಟಿದ್ದಾರೆಂದು ಹೇಳಿದ್ದಾರೆ. ಇದು ಏನೇ ಆಗಲಿ ಇಂಥ ವಿಷಯದ ಬಗ್ಗೆ ಒಂದು ಅಭಿಪ್ರಾಯಕ್ಕೆ ಬಂದು ಅವರ ಮನಸ್ಸಿಗೆ ಬೇಸರ ಬರಕೂಡದೆಂದು ಹೇಳಿ ನಮ್ಮ ರಾಜ್ಯದ ಹೊರಗಿನ ತಾಂತ್ರಿಕಜ್ಞರನ್ನು ನೇಮಕ ಮಾಡಿ ಅವರು ಕೊಟ್ಟಿರತಕ್ಕಂಥ ಮೆಮೊರಾಂಡಮ್‌ನ್ನು ಸರ್ಕಾರಕ್ಕೆ ಸಬ್‌ಮಿಟ್ ಮಾಡಿದ್ದೇವೆ. ಅದರ ಬಗ್ಗೆ ತಾಂತ್ರಿಕಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ರಾಜ್ಯದ ತಾಂತ್ರಿಕಜ್ಞರ ಬಗ್ಗೆ ಕೊರತೆ ಇದ್ದುದರಿಂದ ಜಿಜ್ಞಾಸೆ ಬಂದಿದೆ. ಹೀಗೆಯೇ ಮಾಡಬೇಕೆಂದು ಒಬ್ಬರು ಹೇಳಿದರೆ, ಹಿಂದಿನದೇ ಸರಿಯಾಗಿದೆ ಎಂದು ಇದು ಬೇಡವೆಂದು ಮತ್ತೊಬ್ಬರು ಹೇಳುತ್ತಿರುತ್ತಾರೆ. ಮತ್ತೆ ಈ ರಾಜ್ಯದ ತಾಂತ್ರಿಕಜ್ಞರು ತಮ್ಮ ಮೆಮೊರಾಂಡಮ್‌ನಲ್ಲಿ ಏನು ಸೂಚಿಸಿದ್ದಾರೆ ಅದೆಲ್ಲಾ ವಿಷಯಗಳನ್ನು ಪರಿಶೀಲನೆ ಮಾಡಿ, ಮಠಾಧೀಶ್ವರರು ರಾಜಕಾರಣಿಗಳು ಮತ್ತು ಸಮಾಜದ ಮುಖಂಡರನ್ನು ಕರೆಯಿಸಿ, ಹೊಸ ತಾಂತ್ರಿಕಜ್ಞರು ಕೊಟ್ಟಿರತಕ್ಕಂಥದ್ದು ಏನು ಮೆಮೊರಾಂಡಮ್ ಇರುತ್ತದೆ. ಅದರ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಬೆಂಗಳೂರು–ಮೈಸೂರು ರೈಲು ಮಾರ್ಗವನ್ನು ಮೀಟರ್ ಗೇಜ್‌ನಿಂದ ಬ್ರಾಡ್ ಗೇಜಾಗಿ ಪರಿವರ್ತಿಸುವ ಬಗ್ಗೆ

೭೯೯. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಬೆಂಗಳೂರುಗಳ ರೈಲ್ವೆ ಮಾರ್ಗವನ್ನು ಮೀಟರ್‌ಗೇಜ್‌ನಿಂದ ಬ್ರಾಡ್ ಗೇಜ್‌ಗೆ ಪರಿವರ್ತಿಸಲು ಕೆಲಸ ಪ್ರಾರಂಭಿಸಿ ಎಷ್ಟು ವರ್ಷವಾಯಿತು ?